**<u>ದಿನಾಂಕಃ10.06-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: ಶ್ರೀ ಡಿ.ಆರ್.ಆರ್., ಪ್ರತಿವಾದಿ ಪರ ವಕೀಲರಿಂದ</u>**

ನಾನು ದ್ವಿತೀಯ ಪಿಯುಸಿ ವರೆಗೆ ವ್ಯಾಸಂಗ ಮಾಡಿರುತ್ತೇನೆ. 1 ನೇ ಪ್ರತಿವಾದಿ ನನ್ನ ತಾಯಿ ಎಂದರೆ ಸರಿ. 2 ನೇ ಪ್ರತಿವಾದಿ ನನ್ನ ಮೂರನೇ ಅಕ್ಕ ಎಂದರೆ ಸರಿ. 3 ನೇ ಪ್ರತಿವಾದಿ ನನ್ನ ಅಣ್ಣನ ಹೆಂಡತಿ ಎಂದರೆ ಸರಿ. ದಾವೆ ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. 1 ಮತ್ತು 2 ನೇ ಪ್ರತಿವಾದಿಯರು ಏನು ತಕರಾರು ಸಲ್ಲಿಸಿರುತ್ತಾರೆ ಎಂದು ಕೇಳಿ





ತಿಳಿದುಕೊಡಿರುತ್ತೇನೆ. ದಾವಾ ಷೆಡ್ಯೂಲ್ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳು ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಯವರಿಗೆ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ತಲಾ 1/7 ನೇ ಭಾಗದ ಹಕ್ಕು ಇರುತ್ತದೆ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಯರ ನಾನು ಹಿಸ್ಸೆಯನ್ನು ಕೇಳದಿದ್ದರೂ ಸದರಿಯವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರು ಭಾಗ ಕೊಡಲು ಸಿದ್ದರಿದ್ದು, 3 ನೇ ಪ್ರತಿವಾದಿಯು ಒಪ್ಪದ ಕಾರಣ ಭಾಗ ಕೊಡುತ್ತಿಲ್ಲ ಎಂದರೆ ಸರಿಯಲ್ಲ.

**<u>ನ್ಯಾಯಾಲಯದ ಪ್ರಶ್ನೆಃ</u>**

**<u>ಪ್ರಶ್ನೆ-</u>**1: ನನ್ನ ಅಣ್ಣ ಯಾವಾಗ ಮೃತರಾಗಿರುತ್ತಾರೆ?
ಉತ್ತರ; ಸಾಕ್ಷಿಯು ಈಗ್ಗೆ 4 ವರ್ಷದ ಹಿಂದೆ ಮೃತರಾಗಿರುತ್ತಾರೆ ಎಂದು ಉತ್ತರಿಸುತ್ತಾರೆ.

**<u>ಪ್ರಶ್ನೆ-2</u>**: ಅಣ್ಣನಿಗೆ ಎಷ್ಟು ಜನ ಮಕ್ಕಳು ?
ಉತ್ತರಃ ನನ್ನ ಅಣ್ಣನಿಗೆ ಇಬ್ಬರು ಮಕ್ಕಳು

**<u>ಪ್ರಶ್ನೆ-3</u>**: ಅಣ್ಣನ ಮಕ್ಕಳಿಗೆ ಎಷ್ಟು ವಯಸ್ಸು ಎಂದರೆ ?
ಉತ್ತರ ಒಬ್ಬರಿಗೆ 12 ವರ್ಷ ಮತ್ತು ಮತ್ತೊಬ್ಬರಿಗೆ 10 ವರ್ಷ.

ಮರು ವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.